KACD310015942023

<u>ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣ, ಹಿರಿಯೂರು.</u>

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಎಂ.ಎ.ಸಿ.ಟಿ., ಹಿರಿಯೂರು ,
ಚಿತ್ರದುರ್ಗ ಜಿಲ್ಲೆ.

<u>ಮೋಟಾರು ವಾಹನ ಪ್ರಕರಣ ಸಂಖ್ಯೆ 161/2024</u>

ದಿನಾಂಕಃ 15 ನೇ ಏಪ್ರಿಲ್ -2026

ಅರ್ಜಿದಾರರು ಃ

1. **ಶ್ರೀಮತಿ ಶಬೀನಾ ಬೇಗಂ**
ಕೋಂ ಲೇಟ್ ರಹೀಂ ಸಾಬ್ @ ರಹೀಂ
ವಯಸ್ಸು ಸುಮಾರು 34 ವರ್ಷಗಳು,

2. **ಕುಮಾರಿ ಸಾನಿಯಾ ಪಿ.ಆರ್**
ತಂದೆ ಮೃತ ಲೇಟ್ ರಹೀಂ ಸಾಬ್ @ ರಹೀಂ
ವಯಸ್ಸು ಸುಮಾರು 18 ವರ್ಷಗಳು,

3. **ಕುಮಾರಿ. ಸಫ್ರಿನ್ ಆರ್**
ತಂದೆ ಮೃತ ಲೇಟ್ ರಹೀಂ ಸಾಬ್ @ ರಹೀಂ
ವಯಸ್ಸು ಸುಮಾರು 16 ವರ್ಷಗಳು,
ಅಪ್ರಾಪ್ತ ವಿದ್ಯಾರ್ಥಿ

ಅರ್ಜಿದಾರರ ಸಂಖ್ಯೆ 3 ಅಪ್ರಾಪ್ತ ವಯಸ್ಕರು ಅವರ ನೈಸರ್ಗಿಕ ತಾಯಿ 1 ನೇ ಅರ್ಜಿದಾರರು ಅವರ ನೈಸರ್ಗಿಕ ಪೋಷಕರಾಗಿ ಪ್ರತಿನಿಧಿಸುತ್ತಾರೆ.

4. **ಶಹಜಾನ್ ಸಾಬ್**

SUJATHA SUVARNA B
Digitally signed by SUJATHA SUVARNA B
Date: 2026.04.17 15:51:04 +0530

ತಂದೆ ಸಣ್ಣ ಹೊನ್ನೂರ್ ಸಾಬ್,
ವಯಸ್ಸು ಸುಮಾರು 68 ವರ್ಷಗಳು,

5. **ಮುಮ್‌ತಾಜ್**
ಕೋಂ ಶಹಜಾನ್ ಸಾಬ್
ವಯಸ್ಸು ಸುಮಾರು 65 ವರ್ಷಗಳು,
ಎಲ್ಲರ ವಾಸ ಪಿಟ್ಲಾಲಿ ಗ್ರಾಮ,
ಹಿರಿಯೂರು ತಾಲ್ಲೂಕು.

(ಅರ್ಜಿದಾರರ ಪರವಾಗಿಃ ಶ್ರೀ ಸಿ.ಎಂ., ವಕೀಲರು)

– ವಿರುದ್ಧ –

ಎದುರುದಾರರು ಃ 1. **ಹೆಚ್ ಸಿ ನಾಗರಾಜಯ್ಯ ,**
ಸೀ ಬರ್ಡ್ ಟೂರಿಸ್ಟ್ ಬಸ್ ಪ್ರೊಪ್ರೈ ಟರ್,
ಕೆಎ.01.ಎಬಿ.7426
ವಾಸಃ ನಂ.24.ಅನಂತ ಆರ್ಕೆಡ್
ಕಲಾಸಿಪಾಳ್ಯ, ಬೆಂಗಳೂರು 560002

2. **ದಿ ಮ್ಯಾನೇಜರ್,**
ಓರಿಯೆಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್,
ಬ್ಯಾಂಚ್ ಆಫೀಸ್, ಶಾರದಾ ಕಾಂಪ್ಲೆಕ್ಸ್,
ಕೆ.ಎಸ್ ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ,
ಚಿತ್ರದುರ್ಗ

(ಪಾಲಿಸಿ ನಂಬರ್ 421402/31/2023/1379)
(ವಾಯಿದೆಃ ದಿನಾಂಕಃ 30.09.2022 ರಿಂದ
29.09.2023 ರ ವರೆಗೆ)

(1 ನೇ ಎದುರುದಾರರ ಪರವಾಗಿಃ ಶ್ರೀ ಜಿ.ಕೆ.ಎಂ .,ವಕೀಲರು)
(2 ನೇ ಎದುರುದಾರರ ಪರವಾಗಿಃ ಶ್ರೀ ಹೆಚ್.ಎಂ ., ವಕೀಲರು)

ಅರ್ಜಿಯ ಸ್ವರೂಪ : ಅಪಘಾತದಿಂದ ಮೃತಪಟ್ಟ ಕುರಿತು ಪರಿಹಾರ ಕೋರಿ.
ಅರ್ಜಿ ದಾಖಲಾದ ದಿನಾಂಕ : 22.12.2023

ಸಾಕ್ಷಿಯ ವಿಚಾರಣೆ ದಿನಾಂಕ	:	18.12.2025
ತೀರ್ಪು ಘೋಷಿಸಿದ ದಿನಾಂಕ	:	15.04.2026
ಒಟ್ಟು ಅವಧಿ	:	ವರ್ಷಗಳು ತಿಂಗಳು ದಿವಸಗಳು 02 03 23

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಹಿರಿಯೂರು .

ತೀರ್ಪು

ಶ್ರೀ ರಹೀಂ ಯಾನೆ ರಹೀಂ ಸಾಬ್ ಬಿನ್ ಶಹಜಾನ್ ಸಾಬ್ ಇವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರಿಂದ ಅರ್ಜಿದಾರರು ಈ ಸಂಬಂಧವಾಗಿ ಅವರ ವಾರಸುದಾರರಾಗಿ ಕಲಂ 166 ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಎದುರುದಾರರಿಂದ ರೂ.70,00,000/- ಪರಿಹಾರ ಹಣವನ್ನು ಶೇಕಡಾ 12.00ರ ಬಡ್ಡಿಯೊಂದಿಗೆ ಕೊಡಿಸುವಂತೆ ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ವಿವರಿಸಿದ ಸಂಗತಿಗಳು ಈ ಕೆಳಗಿನಂತೆ ಇರುತ್ತದೆಃ

ದಿನಾಂಕ 04-02-2023 ರಂದು ಸುಮಾರು 7-30 ಗಂಟೆ ಸಮಯದಲ್ಲಿ ರಹೀಂ ಇವರು ಆನಂದಪ್ಪ ರವರೊಂದಿಗೆ ಮೋಟರ್ ಸೈಕಲ್ ಸಂಖ್ಯೆ ಕೆಎ.05.ಜೆ.ಎಫ್.9234 ರಲ್ಲಿ ಪಿಟ್ಲಾಲಿ ಗ್ರಾಮದಿಂದ ಬಗ್ಗನಾಡು ಗ್ರಾಮಕ್ಕೆ ಕೆಲಸಕ್ಕೆ ಹೋಗುತ್ತಿದ್ದು ಮೋಟರ್ ಸೈಕಲ್ ಕೆ ಆರ್ ಹಳ್ಳಿ ದಾಟೀ ಎನ್.ಹೆಚ್-4 ರಸ್ತೆಯಲ್ಲಿ ಹೋಗುತ್ತಿರುವಾಗ ಎದುರುಗಡೆಯಿಂದ ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ಚಾಲಕನು ಬೆಂಗಳೂರು ಕಡೆಯಿಂದ ಹಿರಿಯೂರು ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಯಾವುದೇ ನಿಯಮಗಳನ್ನು ಪಾಲಿಸದೆ ಬಂದು ಡಿಕ್ಕಿ ಪಡಿಸಿದ್ದು

ಇದರಿಂದ ರಹೀಂ ಮತ್ತು ಆನಂದ್ ಇವರಿಗೆ ಗಾಯಗಳಾಗಿದ್ದು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದುಕೊಂಡು ಹೋಗುವಾಗ ರಹೀಂ ರಸ್ತೆಯಲ್ಲಿ ಮೃತಪಟ್ಟಿರುತ್ತಾರೆ. ತದನಂತರ ಅವರನ್ನು ಶವ ಸಂಸ್ಕಾರಕ್ಕೆ ಕರೆದುಕೊಂಡು ಬಂದಿದ್ದು, ಶವ ಸಂಸ್ಕಾರಕ್ಕೆ ಒಟ್ಟು ರೂ.1,00,000/- ಮತ್ತು ವೈದ್ಯಕೀಯ ಖರ್ಚು ರೂ.50,000/- ಆಗಿರುತ್ತವೆ ಅಪಘಾತದ ಪೂರ್ವದಲ್ಲಿ ರಹೀಂ ಇವರು ಮೇಸ್ತ್ರಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ ರೂ.40,000/- ಸಂಪಾದನೆ ಮಾಡುತ್ತಿದ್ದು ಮತ್ತು ವ್ಯವಸಾಯದಿಂದ ರೂ.3,00,000/- ರೂಪಾಯಿಗಳನ್ನು ಸಂಪಾದನೆ ಮಾಡುತ್ತಿರುತ್ತಾರೆ. 1 ನೇ ಅರ್ಜಿದಾರರು ರಹೀಂ ಇವರ ಹೆಂಡತಿಯಾಗಿದ್ದು 2 ಮತ್ತು 3 ನೇ ಅರ್ಜಿದಾರರು ಅವರ ಮಕ್ಕಳಾಗಿರುತ್ತಾರೆ 4 ಮತ್ತು 5 ನೇ ಅರ್ಜಿದಾರರು ಅವರ ತಂದೆ ತಾಯಿಯಾಗಿರುತ್ತಾರೆ ಆದ್ದರಿಂದ ಈ ಅಪಘಾತವು ಸೀಬರ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ಚಾಲಕನ ತಪ್ಪಿನಿಂದ ಆಗಿದ್ದು 1 ನೇ ಎದುರುದಾರರು ಮಾಲೀಕರಾಗಿದ್ದು 2 ನೇ ಎದುರುದಾರರು ಕಂಪನಿಯರಾಗಿದ್ದರಿಂದ ಪರಿಹಾರ ಕೊಡಲು ಭಾದ್ಯಸ್ಥರಾಗಿರುತ್ತಾರೆ.

3. ಸಮನ್ಸ್ ಜಾರಿಯಾದ ನಂತರ, 1 ಮತ್ತು 2 ನೇ ಎದುರುದಾರರು ತಮ್ಮ ವಕೀಲರ ಮುಖೇನ ನ್ಯಾಯಾಲಯಕ್ಕೆ ಹಾಜರಾಗಿದ್ದು, 2 ನೇ ಎದುರುದಾರರು ಪ್ರತ್ಯೇಕವಾಗಿ ತಮ್ಮ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. 1 ನೇ ಎದುರುದಾರರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. <u>2 ನೇ ಎದುರುದಾರರ ತಕರಾರಿನ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ</u>

2 ನೇ ಎದುರುದಾರರು ರಹೀಂ ಇವರ ವಯಸ್ಸು, ಆದಾಯ ಮತ್ತು ಅಪಘಾತವನ್ನು ಒಪ್ಪಿಕೊಳ್ಳುತ್ತಿಲ್ಲ ಮತ್ತು ಅರ್ಜಿದಾರರು ರಹೀಂ ಇವರ ವಾರಸುದಾರರು ಎಂಬುದನ್ನು ಕೂಡ ಅವರೇ ಪುರಾವೆಗೊಳಿಸಬೇಕಾಗಿರುತ್ತದೆ. ಎದುರುದಾರರು ಸೀಬರ್ಡ್ ಟೂರಿಸ್ಟ್ ಬಸ್

ನಂ.ಕೆಎ.01.ಎಬಿ.7426 ಪೈಕಿ ಯಾವುದೇ ವಿಮೆ ನೀಡಿರುವುದಿಲ್ಲ ಮತ್ತು ಅಪಘಾತದ ಸಮಯದಲ್ಲಿ ವಾಹನ ಚಾಲಕನಿಗೆ ಸೂಕ್ತ ಮತ್ತು ಪರಿಣಾಮಕಾರಿಯಾದ ಚಾಲನಾ ಪರವಾನಿಗೆ ಹೊಂದದಂತಹ ವ್ಯಕ್ತಿಗೆ ವಾಹನವನ್ನು ಚಲಾವಣೆ ಮಾಡಲು ನೀಡಿ ವಿಮೆಯ ಷರತ್ತನ್ನು ಉಲ್ಲಂಘಿಸಿರುತ್ತಾರೆ. ಆದ್ದರಿಂದ ವಿಮೆ ಕಂಪೆನಿಯವರು ಪರಿಹಾರ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ, ಅಪಘಾತದಿಂದ ಮೃತರಿಗೆ ಗಾಯಗಳಾಗಿ ಮರಣ ಹೊಂದಿದ್ದಾರೆ ಎಂಬುದನ್ನು ಈ ಎದುರುದಾರರು ಒಪ್ಪುತ್ತಿಲ್ಲ. ಅರ್ಜಿದಾರರು ಕೋರಿದ ಪರಿಹಾರವು ಅತಿ ಹೆಚ್ಚಿನದ್ದಾಗಿರುತ್ತದೆ. ಈ ಅರ್ಜಿಯು ಕಾನೂನು ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ, ಒಂದು ವೇಳೆ ಪರಿಹಾರವನ್ನು ನೀಡಿದ್ದಲ್ಲಿ ಬಡ್ಡಿಯೂ ಶೇಕಡ 6 ರಷ್ಟು ಮಾತ್ರ ಆದೇಶ ಮಾಡಬೇಕಾಗುತ್ತದೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ಮೇಲ್ಕಂಡ ಅರ್ಜಿ ಹಾಗೂ ಲಿಖಿತ ಹೇಳಿಕೆಯ ಆಧಾರದ ಮೇಲೆ ಈ ಕೆಳಗಿನಂತೆ ವಿವಾದಾಂಶವನ್ನು ರಚಿಸಿರುತ್ತಾರೆ.

(1) Whether the petitioners prove that, the deceased Raheem @ Raheem Sab was died in a road traffic accident arising out of use of Sea Bird Tourist bus bearing Reg.No.KA-01-AB-7426 occurred on 04.02.2023 at about 7.30 a.m., near K.R.Hally gate, NH.IV road, Hiriyur-Bangalore road, Hiriyur Taluk, as averred in the petition?

(2) Whether the petitioners are entitled for compensation? If so, to what extent and from whom?

(3) What order or award?

6. ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸುವುದಕ್ಕಾಗಿ, 1 ನೇ ಅರ್ಜಿದಾರರು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಒಟ್ಟು 14 ದಾಖಲಾತಿಗಳನ್ನು ನಿ.ಪಿ-1 ರಿಂದ 14 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ, 2 ನೇ ಎದುರುದಾರರು ತಮ್ಮ ಪರವಾಗಿ ಯಾವುದೇ ವಿಚಾರಣೆ ಮಾಡಿಕೊಂಡಿಲ್ಲ ವಿಮಾ ಪಾಲಿಸಿಯ ಪ್ರತಿಯನ್ನು ಒಪ್ಪಿಗೆ ಮೇರೆಗೆ ನಿ.ಆರ್.1 ಎಂದು ಗುರುತಿಸಿಕೊಂಡಿರುತ್ತಾರೆ.

7. ಅರ್ಜಿದಾರರ ಮತ್ತು ಎದುರುದಾರರ ಪರ ವಕೀಲರಿಂದ ವಾದವನ್ನು ಕೇಳಲಾಯಿತು.

8. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ವಿವಾದಾಂಶ-1 : ಸಕಾರಾತ್ಮಕವಾಗಿ

ವಿವಾದಾಂಶ-2 : ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶ-3 : ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ

ಕಾ ರ ಣ ಗಳು

9. **ವಿವಾದಾಂಶ-1:-** 1 ನೇ ಅರ್ಜಿದಾರರು ಅಪಘಾತವು ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ರ ಚಾಲಕನ ತಪ್ಪಿನಿಂದ ಆಗಿದೆ ಎಂದು ಪುರಾವೆಗೊಳಿಸಲು ತನ್ನನ್ನು ತಾನು ಪಿ.ಡಬ್ಲೂ-1 ಎಂದು ವಿಚಾರಣೆ ಮಾಡಿಕೊಂಡು ಮುಖ್ಯ ವಿಚಾರಣಾ ಪ್ರಮಾಣ

ಪತ್ರವನ್ನು ಸಲ್ಲಿಸಿ ಅರ್ಜಿಯ ಅಂಶವನ್ನು ಪುನರುಚ್ಛರಿಸಿರುತ್ತಾರೆ ಹಾಗೂ ನಿ.ಪಿ–1 ರಿಂದ 14 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. 2 ನೇ ಎದುರುದಾರರು ತಮ್ಮ ಪರವಾಗಿ ಯಾವುದೇ ವಿಚಾರಣೆ ಮಾಡಿಕೊಂಡಿರುವುದಿಲ್ಲ ಆದರೆ ನಿ.ಆರ್.1 ವಿಮಾ ಪಾಲಿಸಿಯ ಪ್ರತಿಯನ್ನು ಗುರುತಿಸಿಕೊಂಡಿರುತ್ತಾರೆ.

10. ನಿ.ಪಿ–1 ಪ್ರಥಮ ವರ್ತಮಾನ ವರದಿಯ ಪ್ರತಿ, ನಿ.ಪಿ–2 ಹೇಳಿಕೆ ಪ್ರತಿ, ನಿ.ಪಿ–3 ಸ್ಥಳ ಮಹಜರಿನ ಪ್ರತಿ, ನಿ.ಪಿ–4 ಶವ ತನಿಖಾ ವರದಿ, ನಿ.ಪಿ–5 ಮರಣೋತ್ತರ ಪರೀಕ್ಷೆಯ ಪ್ರತಿ, ನಿ.ಪಿ–6 ಐ.ಎಂ.ವಿ. ವರದಿಯ ಪ್ರತಿ, ನಿ.ಪಿ–7 ಚಾರ್ಜ್ ಶೀಟಿನ ಪ್ರತಿ, ನಿ.ಪಿ–8 1 ನೇ ಅರ್ಜಿದಾರರ ಆಧಾರ್ ಕಾರ್ಡ್ ಪ್ರತಿ, ನಿ.ಪಿ–9 2 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ, ನಿ.ಪಿ–10 3 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ, ನಿ.ಪಿ–11 4 ನೇ ಅರ್ಜಿದಾರರ ಆಧಾರ್ ಕಾರ್ಡ್‌ನ ಪ್ರತಿ, ನಿ.ಪಿ–12 5 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ, ನಿ.ಪಿ–13 ಮೃತ ರಹೀಂ ಸಾಬ್ ರವರ ಆಧಾರ್ ಕಾರ್ಡ್ ನ ಪ್ರತಿ, ನಿ.ಪಿ–14 ವಂಶ ವೃಕ್ಷ ಆಗಿರುತ್ತದೆ.

11. ಈ ಅಪಘಾತದ ಬಗ್ಗೆ ಮತ್ತು ಪರಿಹಾರದ ಬಗ್ಗೆ ವಿವರಿಸ ಬೇಕಾದ್ದಲ್ಲಿ ದಾಖಲಾತಿಗಳನ್ನು ವಿವರಿಸುವುದು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಹಾಜರುಪಡಿಸಿದ ನಿ.ಪಿ–1 ಪ್ರಥಮ ವರ್ತಮಾನ ವರದಿಯಾಗಿದ್ದು, ಅದರ ಪ್ರಕಾರ ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ರ ಚಾಲಕನ ವಿರುದ್ಧ ಅಪರಾಧ ಪ್ರಕರಣವನ್ನು ಹಿರಿಯೂರು ಟೌನ್ ಪೊಲೀಸ್ ಠಾಣೆಯವರು ದಾಖಲಿಸಿರುವುದು ಕಂಡು ಬರುತ್ತದೆ. ನಿ.ಪಿ–2 ದೂರಿನ ಪ್ರತಿಯಾಗಿದ್ದು, ಆ ದೂರನ್ನು ಗಮನಿಸಿದಾಗ ಸಮೀವುಲ್ಲಾ ಇವರು ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ರ ಬಸ್ ರ ಚಾಲಕನ ವಿರುದ್ಧ ಹಿರಿಯೂರು ಟೌನ್ ಪೊಲೀಸ್

ಠಾಣೆಯಲ್ಲಿ ದೂರು ನೀಡಿರುವುದು ಹಾಗೂ ಸುಭಾಷ್ ಮಾರುತಿ ಜಾದವ್ ಇವರ ವಿರುದ್ಧ ಪ್ರಕರಣ ದಾಖಲು ಮಾಡಿರುವುದು ಕಂಡು ಬರುತ್ತದೆ.

12. ನಿ.ಪಿ-3 ಅಪಘಾತ ನಡೆದ ಸ್ಥಳ ಪಂಚನಾಮೆಯಾಗಿದ್ದು, ಆ ದಾಖಲಾತಿಯನ್ನು ಗಮನಿಸಿದಾಗ, ಸಂಬಂಧಪಟ್ಟ ಪೊಲೀಸರು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ, ನಕಾಶೆ ತಯಾರಿಸಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ ಅಪಘಾತಕ್ಕೊಳಪಟ್ಟ ವಾಹನಗಳನ್ನು ಪಂಚನಾಮೆಯ ಮೂಲಕ ವಶಪಡಿಸಿಕೊಂಡಿರುವುದು ಕಂಡು ಬರುತ್ತದೆ. ನಿ.ಪಿ-4 ಶವ ತನಿಖಾ ವರದಿಯಾಗಿದ್ದು, ಸಂಬಂಧಪಟ್ಟ ಪೊಲೀಸರು ರಹೀಂ ಯಾನೆ ರಹೀಂ ಸಾಬ್ ಇವರ ಮೃತ ದೇಹದ ಮೇಲೆ ಪಂಚರ ಸಮಕ್ಷಮ ಶವ ಪಂಚನಾಮೆ ಮಾಡಿ ತನಿಖಾ ವರದಿಯನ್ನು ಮಾಡಿರುವುದು ಕಂಡು ಬರುತ್ತದೆ.

13. ನಿ.ಪಿ-**5** ಶವ ಪರೀಕ್ಷೆ ವರದಿಯಾಗಿದ್ದು, ಆ ದಾಖಲಾತಿಯನ್ನು ಗಮನಿಸಿದಾಗ, ವೈದ್ಯರು ಮೃತ ರಹೀಂ ಯಾನೆ ರಹೀಂ ಸಾಬ್ ಇವರ ಮೃತದೇಹವನ್ನು ಪರೀಕ್ಷೆ ಮಾಡಿ, ಈ ಅಪಘಾತವು ತೀವ್ರ ರಕ್ತಸ್ರಾವದಿಂದ ಸಾವು ಸಂಭವಿಸಿದೆ ಎಂಬ ವರದಿಯನ್ನು ನೀಡಿರುವುದು ಕಂಡು ಬರುತ್ತದೆ. ನಿ.ಪಿ-**6** ಐ ಎಂ ವಿ ವರದಿಯ ಪ್ರತಿಯಾಗಿದ್ದು ಆ ದಾಖಲಾತಿಯ ಪ್ರಕಾರ ಸಾರಿಗೆ ಪ್ರಾಧಿಕಾರ ಅಧಿಕಾರಿ, ಹಿರಿಯೂರು ಇವರು ಅಪಘಾತಕ್ಕೀಡಾದ ವಾಹನಗಳನ್ನು ಪರಿಶೀಲಿಸಿ, ವಾಹನಗಳಿಗಾಗಿರುವ ಜಖಂಗಳನ್ನು ನಮೂದು ಮಾಡಿರುವುದು ಹಾಗೂ ವಾಹನಗಳ ತಾಂತ್ರಿಕ ಲೋಪದೋಷಗಳಿಂದ ಅಪಘಾತವು ಸಂಭವಿಸಿರುವುದಿಲ್ಲವೆಂದು ಅಭಿಪ್ರಾಯ ನೀಡಿರುವುದು ಕಂಡು ಬರುತ್ತದೆ.

14. ನಿ.ಪಿ–7 ದೋಷಾರೋಪಣಾ ಪತ್ರವಾಗಿದ್ದು, ಆ ದಾಖಲಾತಿ ಪ್ರಕಾರ ತನಿಖಾಧಿಕಾರಿಗಳು ತನಿಖೆಯನ್ನು ಮಾಡಿ, ಅಪಘಾತವು ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ರ ಚಾಲಕನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಹಾಗೂ 304(ಎ) ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಎದುರುದಾರರು ಎಲ್ಲಿಯೂ ಕೂಡ ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿ ರದ್ದುಪಡಿಸಿಕೊಂಡಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

15. ಈ ಹಂತದಲ್ಲಿ ನ್ಯಾಯಾಲಯವು ಈ ಕೆಳಗಿನ ತೀರ್ಪುಜನ್ಯವನ್ನು ಹಾಜರುಪಡಿಸಿದ್ದು, ಈ ತೀರ್ಪುಜನ್ಯದಲ್ಲಿ ಈ ಪ್ರಾಧಿಕಾರವು ಅಪಘಾತವಾದ ಬಗ್ಗೆ ಕೂಲಂಕುಶವಾಗಿ ವಿಚಾರಣೆ ಮಾಡುವಂತಹ ಅವಶ್ಯಕತೆ ಇಲ್ಲ ಎಂದು ಉಲ್ಲೇಖಿಸಿರುತ್ತಾರೆ.

2014 Acci.C.R. 711 (Del.) (United India Insurance Co., Ltd., Vs. Deepak Goel and others), wherein at para No.20 and 21 it is observed as follows:

"20. In deciding the accident cases, the Tribunals or the Courts bear in mind the caution struck by the Apex Court that a claim before the Motor Accidents Claims Tribunal is neither a criminal case nor a civil case. In a criminal case in order to have conviction, the matter is to be proved beyond reasonable doubt and in a civil case the matter is to be decided on the basis of preponderance of evidence, but in a claim petition before the Motor Accidents Claims Tribunal, the standard of proof is much below than what is required in a criminal case as well as in a civil case.

Undoubtedly, the enquiry before the Tribunal is a summary enquiry and, therefore, does not require strict proof of liability.

21. Nonetheless, in a case where FIR is lodged, charge-sheet is filed and specially in a case where driver after causing the accident had fled away from the spot, then the documents mentioned above are sufficient to establish the fact that the driver of the offending vehicle was negligent in causing the accident particularly when there was no defence available from his side before the learned Tribunal. Thus, the claimants have prove negligence of the driver of the offending vehicle."

16. ನಿ.ಪಿ-4 ಮತ್ತು 5 ನ್ನು ಗಮನಿಸಿದಾಗ ರಹೀಂ ಯಾನೆ ರಹೀಂ ಸಾಬ್ ಇವರು ಅಪಘಾತದ ಹಿನ್ನೆಲೆಯಲ್ಲಿ ತೀರಿಕೊಂಡಿರುವುದು ಕಂಡು ಬರುತ್ತದೆ. ಕಡತವನ್ನೆಲ್ಲಾ ಗಮನಿಸಿದಾಗ ಸೀಬರ್ಡ್ ಟೂರಿಸ್ಟ್ ಬಸ್ ನಂ.ಕೆಎ.01.ಎಬಿ.7426 ಚಾಲಕನ ತಪ್ಪಿನಿಂದ ಈ ಅಪಘಾತ ಉಂಟಾಗಿದೆ ಎಂದು ಕಂಡುಬರುತ್ತದೆ. ಆದ್ದರಿಂದ, **ವಿವಾದಾಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

17. ವಿವಾದಾಂಶ-2:- ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಅಪಘಾತ ಪೂರ್ವದಲ್ಲಿ ರಹೀಂ ಸಾಬ್ ಇವರು ಮೇಸ್ತ್ರಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.40,000/-ಗಳನ್ನು ಸಂಪಾದನೆ ಮಾಡುತ್ತಿದ್ದರೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ, ಆದರೆ ಇದನ್ನು ಪುರಾವೆಗೊಳಿಸಲು ಯಾವುದೇ ದಾಖಲಾತಿಗಳನ್ನು ಹಾಜಪಡಿಸಿರುವುದಿಲ್ಲ. ಆದ್ದರಿಂದ ಗೌರವಾನ್ವಿತ ಕಾನೂನು ಪ್ರಾಧಿಕಾರದವರು ನಿಗದಿಪಡಿಸಿದಂತಹ ಆದಾಯವನ್ನು ರಹೀಂ ಇವರ

ಮಾಸಿಕ ಆದಾಯವೆಂದು ಪರಿಗಣಿಸುವುದು ಸೂಕ್ತವೆಂದು ಈ ನ್ಯಾಯಾಧೀಕರಣವು ಅಭಿಪ್ರಯಿಸಿರುತ್ತದೆ. ಈ ಅಪಘಾತವು 2023 ರಂದು ಸಂಭವಿಸಿದ್ದು ಅವರ ಸಂಬಳವನ್ನು ತಿಂಗಳಿಗೆ ರೂ.16,000/-ಗಳು ಎಂದು ಪರಿಗಣಿಸುವುದು ಸೂಕ್ತವೆಂದು ಈ ನ್ಯಾಯಾಧಿಕರಣವು ತೀರ್ಮಾನಕ್ಕೆ ಬಂದಿರುತ್ತದೆ. ಅರ್ಜಿದಾರರು ಮೃತ ರಹೀಂ ಸಾಬ್ ಇವರ ವಯಸ್ಸನ್ನು ಪುರಾವೆಗೊಳಿಸಲು ಆಧಾರ್ ಕಾರ್ಡ್ ನ್ನು ಹಾಜರಪಡಿಸಿದ್ದು ಆ ದಾಖಲಾತಿಯಲ್ಲಿ ಅವರ ಹುಟ್ಟಿದ ದಿನಾಂಕ 01.01.1985 ಎಂದು ನಮೂದು ಮಾಡಿರುವುದು ಕಂಡುಬರುತ್ತದೆ.

(ಎ) <u>ಅವಲಂಭನೆಯಿಂದ ವಂಚಿತರಾದ ಕಾರಣಕ್ಕಾಗಿಃ-</u>

ರಹೀಂ ಯಾನೆ ರಹೀಂ ಸಾಬ್ ರವರ ವಯಸ್ಸನ್ನು ಪುರಾವೆಗೊಳಿಸುವ ಸಂಬಂಧ ಅರ್ಜಿದಾರರು ನಿ.ಪಿ-13 ರಂತೆ ರಹೀಂ ಯಾನೆ ರಹೀಂ ಸಾಬ್ ರವರ ಆಧಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಆ ದಾಖಲಾತಿಯಲ್ಲಿ ರಹೀಂ ಯಾನೆ ರಹೀಂ ಸಾಬ್ ರವರ ಜನ್ಮ ದಿನಾಂಕಃ 01.01.1985 ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಅಪಘಾತವು ದಿನಾಂಕಃ 04.02.2023 ರಂದು ಸಂಭವಿಸಿದ್ದು, ಅಪಘಾತವಾಗುವ ಕಾಲಕ್ಕೆ ರಹೀಂ ಯಾನೆ ರಹೀಂ ಸಾಬ್ ರವರ ವಯಸ್ಸು 38 ವರ್ಷ ಎಂದು ಕಂಡು ಬರುತ್ತದೆ. ಆದ್ದರಿಂದ, ಈ ನ್ಯಾಯಾಧೀಕರಣವು ಅಪಘಾತದ ಸಮಯದಲ್ಲಿ ಮೃತ ರಹೀಂ ಯಾನೆ ರಹೀಂ ಸಾಬ್ ರವರ ವಯಸ್ಸು 38 ವರ್ಷ ಎಂದು ಪರಿಗಣಿಸಲಾಗಿರುತ್ತದೆ.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ 2018 ಎಸ್.ಸಿ.ಸಿ.ಆರ್. 39 National Insurance Company Limited V/s Pranaya Sethi and others, ಪ್ರಕರಣದಲ್ಲಿ ಪ್ಯಾರಾ ನಂಬರ್.61 3 ರಲ್ಲಿ ಈ ಕೆಳಗಿನಂತೆ ತೀರ್ಮಾನಿಸಿರುತ್ತಾರೆ.

(iii) While determining the income, an addition of 50% of actual salary to the income of the deceased

towards future prospects, where the deceased had a permanent job and as below the age of 40 years, should be made. The addition should be 30%, if the age of the deceased was between 40 to 50 years. In case the deceased was between the age of 50 to 60 years, the addition should be 15% Actual salary should be read as actual salary less tax.

(iv) In case the deceased was self-employed or on fixed salary, an addition of 40% of the established income should be the warrant where the deceased was below the age of 40 years. An addition of 25% where the deceased was between the age of 40 to 50 years and 10% where the deceased was between the age of 50 to 60 years should be regarded as necessary method of computation. The established income means the income minus the tax component.

(v) For determination of the multiplicand, the deduction for personal and living expenses, the tribunals and the courts shall be guided by paragraphs 30 to 32 of Sarla Verma which we have reproduced herein before.

(vi) The selection of multiplier shall be as indicated in the Table in Sarla Verma read with paragraph 42 of that judgment.

(vii) The age of the deceased should be the basis for applying the multiplier.

(viii) Reasonable figures on conventional heads, namely, loss of estate, loss of consortium and funeral

expenses should be Rs.15,000/- Rs.40,000/- and Rs.15,000/- respectively. The aforesaid amounts should be enhanced at the rate of 10% in every three years.

ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಸರಳಾ ವರ್ಮ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ತೀರಿಕೊಂಡಂತಹ ವ್ಯಕ್ತಿಯ ಮದುವೆಯಾಗದಿದ್ದಲ್ಲಿ ಅವಲಂಬಿತರು 4 ಮಂದಿ ಆಗಿದ್ದಲ್ಲಿ, ಅವರಿಗೆ ಅವರ ಸ್ವಂತ ಖರ್ಚಿನ ಬಾಬ್ತು 1/4 ನೇ ಅಂಶ ಕಡಿತಗೊಳಿಸಬೇಕೆಂದು ತೀರ್ಮಾನಿಸಿರುತ್ತಾರೆ. ತೀರಿಕೊಂಡಂತಹ ವ್ಯಕ್ತಿಯ ವಯಸ್ಸು 38 (36-40) ಇದ್ದಲ್ಲಿ, ಅವರ ಸಂಬಳಕ್ಕೆ ಗುಣಾಂಕ 15 ಆಗಿರುತ್ತದೆ. ಅರ್ಜಿಯನ್ನು ಗಮನಿಸಿದಾಗ, 1 ನೇ ಅರ್ಜಿದಾರರು ಮೃತ ರಹೀಂ ಯಾನೆ ರಹೀಂ ಸಾಬ್ ರವರ ಹೆಂಡತಿಯಾಗಿದ್ದು 2 ಮತ್ತು 3 ನೇ ಅರ್ಜಿದಾರರು ಮಕ್ಕಳಾಗಿದ್ದು 4 ಮತ್ತು 5 ನೇ ಅರ್ಜಿದಾರರು ಮೃತ ರಹೀಂ ರವರ ತಂದೆ ತಾಯಿಯಾಗಿರುತ್ತಾರೆ

ಈ ಮೇಲಿನ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿ ಮೃತನು ಸ್ವಉದ್ಯೋಗಿ ಅಥವಾ ಸಂಬಳದ ಹಣದ ಆದಾಯದ ಮೇಲೆ ಅವಲಂಬಿತರಾಗಿರುವವರಾಗಿದ್ದಲ್ಲಿ, ಅವರು 40 ವರ್ಷ ಒಳಗಿದ್ದಲ್ಲಿ, ಅವರ ಆದಾಯದ ಶೇಕಡಾ 40.00 ರಷ್ಟನ್ನು ಭವಿಷ್ಯದ ಆದಾಯ (future prospects) ಎಂದು ಪರಿಗಣಿಸಬೇಕು ಎಂಬುದಾಗಿ ಹೇಳಲಾಗಿರುತ್ತದೆ.

ಮೇಲೆ ವಿವರಿಸಲ್ಪಟ್ಟಂತೆ, ಮೃತ ರಹೀಂ ಯಾನೆ ರಹೀಂ ಸಾಬ್ ಇವರ ಮಾಸಿಕ ಸಂಬಳ ರೂ.16,000/- ಆಗಿದ್ದು, ವರ್ಷಕ್ಕೆ ರೂ.1,92,000/- ಆಗಿದ್ದು, ಆ ಮೊತ್ತದಲ್ಲಿ ಮೃತ ರಹೀಂ ಯಾನೆ ರಹೀಂ ಸಾಬ್ ರವರ ವೈಯಕ್ತಿಕ ಖರ್ಚು ವೆಚ್ಚಗಳಿಗಾಗಿ 1/4 ನೇ ಅಂಶ ಅಂದರೆ ರೂ.48,000/-ನ್ನು ಕಳೆದು, ಉಳಿದ ರೂ.1,44,000/- ಗಳಿಗೆ ಶೇಕಡಾ 40 ರಷ್ಟು ಭವಿಷ್ಯದ ನಿರೀಕ್ಷಿತ ಆದಾಯ ಅಂದರೆ ರೂ.57,600/-ನ್ನು ಸೇರಿಸಿದಾಗ, ಒಟ್ಟು

ರೂ.2,16,000/- ಆಗಿದ್ದು, ಅಪಘಾತದ ಕಾಲಕ್ಕೆ ಮೃತ ರಹೀಂ ಸಾಬ್ ರವರಿಗೆ 38 ವರ್ಷ ವಯಸ್ಸು ಆಗಿತ್ತೆಂದು ಸಾಭೀತಾಗಿದ್ದು, ಅದರಂತೆ ಸರಳಾ ವರ್ಮ ವಿರುದ್ಧ ದೆಹಲಿ ಟ್ರಾನ್ಸ್-ಪೋರ್ಟ್ ಕಾರ್ಪೋರೇಷನ್ ಎ.ಸಿ.ಜೆ 1298 ತೀರ್ಪಿನ ಪ್ರಕಾರ ಮೃತರಿಗೆ ಅನ್ವಯವಾಗುವ ಗುಣಾಂಕ 16 ಆಗಿರುತ್ತದೆ. ಅದರಂತೆ ರೂ..2,16,000/- X 15 = ರೂ.20,16,000/- ಆದ್ದರಿಂದ, ಈ ನ್ಯಾಯಾಧೀಕರಣವು ರೂ.30,24,000/- ಗಳ ಪರಿಹಾರದ ಮೊತ್ತವನ್ನು ಆದಾಯದ ಅವಲಂಬನೆಯಿಂದ ವಂಚಿತರಾದ ಬಾಬ್ತು ಶಿರೋನಾಮೆ ಅಡಿಯಲ್ಲಿ ಅರ್ಜಿದಾರರು ಪಡೆಯಲು ಅರ್ಹರಾಗಿರುತ್ತಾರೆ ಎಂದು ತೀರ್ಮಾನಕ್ಕೆ ಬಂದಿರುತ್ತದೆ.

(ಬಿ)ಅಂತ್ಯ ಸಂಸ್ಕಾರ ಮತ್ತು ಉತ್ತರ ಕ್ರಿಯಾದಿಗಳಿಗಾಗಿ ತಗುಲಿದ ವೆಚ್ಚಃ-

ಅರ್ಜಿದಾರರ ಪ್ರಕಾರ, ಮೃತ ರಹೀಂ ಸಾಬ್ ರವರ ಶವ ಪರೀಕ್ಷೆಯ ನಂತರ ಶವ ಸಾಗಾಟಕ್ಕಾಗಿ, ಶವ ಸಂಸ್ಕಾರ ಹಾಗೂ ಉತ್ತರ ಕ್ರಿಯಾದಿಗಳಿಗಾಗಿ ಒಟ್ಟು ರೂ.50,000/- ಹಣ ಖರ್ಚು ಮಾಡಿರುವುದಾಗಿ ಹೇಳಿರುತ್ತಾರೆ. ಅರ್ಜಿದಾರರು ಅಂತ್ಯಕ್ರಿಯೆಗೆ ಖರ್ಚನ್ನು ಮಾಡಿದ್ದೇವೆ ಎಂದು ತಮ್ಮ ಅರ್ಜಿಯಲ್ಲಿ ಹೇಳಿದ್ದರೂ ಕೂಡ ಅದನ್ನು ಪುರಾವೆಗೊಳಿಸಲು ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲೀ ಅಥವಾ ದಾಖಲಾತಿಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ. ಸಹಜವಾಗಿ ಶವ ಸಾಗಾಟಕ್ಕೆ, ಶವ ಸಂಸ್ಕಾರಕ್ಕೆ ಮತ್ತು ಉತ್ತರಾಧಿಕ್ರಿಯೆಗಳಿಗೆ ಅವರವರ ಸಂಪ್ರದಾಯದ ಪ್ರಕಾರ ವೆಚ್ಚ ಮಾಡಲಾಗುತ್ತದೆ ಎಂಬುದು ಸಾಮಾನ್ಯವಾಗಿ ತಿಳಿದಿರುವ ಸಂಗತಿ. ಮೇಲೆ ವಿವರಿಸಲಾದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ 2018 ಎಸ್.ಸಿ.ಸಿ.ಆರ್. 39 National Insurance Company Limited V/s Pranay Sethi and others, ಪ್ರಕರಣದಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಅಂತ್ಯ ಸಂಸ್ಕಾರಕ್ಕೆ, ಲಾಸ್ ಆಫ್ ಎಸ್ಟೇಟ್ ಮತ್ತು ಒಕ್ಕೂಟದ ನಷ್ಟಕ್ಕಾಗಿ ಶೇಕಡ 10 ರಷ್ಟು ಹೆಚ್ಚುವರಿ ಪರಿಹಾರವನ್ನು ನೀಡಬೇಕೆಂದು ಆದೇಶಿಸಿದ್ದು ಆ ತೀರ್ಪನ್ನು

ದಿಃ 31.10.2017 ರಂದು ಘೋಷಿಸಿದ್ದು ಗೌರವಾನ್ವಿತರ ತೀರ್ಪಿನ ಅಂಶವನ್ನು ಪರಿಗಣಿಸಿದಲ್ಲಿ ಮೃತರ ಅಂತ್ಯ ಸಂಸ್ಕಾರಕ್ಕೆ ಮತ್ತು ಉತ್ತರ ಕ್ರಿಯಾಧಿಗಳಿಗಾಗಿ ರೂ. 18,150/- ಮತ್ತು ಶವ ಸಾಗಾಟಕ್ಕಾಗಿ ರೂ.5,000/- ವೆಚ್ಚವಾಗಿದೆ ಎಂದು ಈ ನ್ಯಾಯಾಧೀಕರಣವು ಅಭಿಪ್ರಯಿಸಿ, ಅದರಂತೆ ಅರ್ಜಿದಾರರು ಪರಿಹಾರದ ಹಣವನ್ನು ಪಡೆಯಲು ಅರ್ಹರಾಗಿರುತ್ತಾರೆ.

(ಸಿ) <u>ಲಾಸ್ ಆಫ್ ಎಸ್ಟೇಟ್</u>ಃ-

ಮೇಲೆ ವಿವರಿಸಲಾದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ 2018 ಎಸ್.ಸಿ.ಸಿ.ಆರ್. 39 National Insurance Company Limited V/s Pranay Sethi and others, ಪ್ರಕರಣದಲ್ಲಿ ಪ್ಯಾರಾ ನಂಬರ್.61 (8) ರಲ್ಲಿ ತೀರ್ಮಾನಿಸಿದಂತೆ ಅರ್ಜಿದಾರರು ರೂ.18,150/- ಗಳ ಪರಿಹಾರದ ಹಣವನ್ನು ರಹೀಂ ರವರ ಮೃತ ಹೊಂದಿದ್ದರ ಕಾರಣಕ್ಕಾಗಿ ಪಡೆಯಲು ಅರ್ಹರಾಗಿರುತ್ತಾರೆ.

(ಡಿ) <u>ಒಕ್ಕೂಟದ ನಷ್ಟಕ್ಕಾಗಿ</u>ಃ-

ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ನಂಬರ್ 9581/2018, ಸೆಪ್ಟೆಂಬರ್-2018 ರಲ್ಲಿನ ಮಗ್ಮಾ ಜನರಲ್ ಇನ್ಸುರೆನ್ಸ್ ಕಂಪೆನಿ ವಿರುದ್ಧ ನನುರಾಮ್ ತೀರ್ಪುಜನ್ಯದಲ್ಲಿ ತಂದೆ-ತಾಯಿಯವರು ಮಗನ ಒಕ್ಕೂಟದ ಪರಿಹಾರ, ಹೆಂಡತಿ ಹಾಗೂ ಮಕ್ಕಳು ಕ್ರಮವಾಗಿ ಸಂಗಾತಿಯ ಒಕ್ಕೂಟ ಹಾಗೂ ಮಕ್ಕಳ ಒಕ್ಕೂಟದ ಪರಿಹಾರ ಪಡೆಯಲು ಅರ್ಹರಿರುತ್ತಾರೆ ಎಂಬ ಅಂಶವನ್ನು ಉಲ್ಲೇಖಿಸಿದ್ದು, ಗೌರವಾನ್ವಿತರ ತೀರ್ಪುಜನ್ಯದ ಆದೇಶದಂತೆ ಅರ್ಜಿದಾರರು ಪೋಷಕರ ಒಕ್ಕೂಟದ ನಷ್ಟವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ, ಈ ಶೀರ್ಷಿಕೆ ಅಡಿಯಲ್ಲಿ ಅರ್ಜಿದಾರರು ತಲಾ ರೂ.48,400/-(48,400x5)=

2,42,000/- ಗಳನ್ನು ಪಡೆಯಲು ಅರ್ಹರೆಂದು ಈ ನ್ಯಾಯಾಧೀಕರಣವು ತೀರ್ಮಾನಿಸಿರುತ್ತದೆ.

18. ಅರ್ಜಿದಾರರು ಈ ಕೆಳಕಂಡಂತೆ ನಷ್ಟ ಪರಿಹಾರ ಪಡೆಯಲು ಅರ್ಹರಿರುತ್ತಾರೆಃ-

(ಎ)	ಮೃತನ ಆದಾಯದ ಅವಲಂಬನೆಯಿಂದ ವಂಚಿತರಾದ ಕಾರಣಕ್ಕಾಗಿ	ರೂ. 30,24,000/-
(ಬಿ)	ಅಂತ್ಯ ಸಂಸ್ಕಾರ ಮತ್ತು ಉತ್ತರ ಕ್ರಿಯಾಧಿಗಳಿಗಾಗಿ ತಗುಲಿದ ವೆಚ್ಚ	ರೂ.18,150/-
(ಸಿ)	ಮೃತರ ಶವ ಸಾಗಾಟಕ್ಕಾಗಿ	ರೂ.5,000/-
(ಡಿ)	ಲಾಸ್ ಆಫ್ ಎಸ್ಟೇಟ್.	ರೂ.18,150/-
(ಇ)	ಒಕ್ಕೂಟದ ನಷ್ಟಕ್ಕಾಗಿ	ರೂ.2,42,000/-
	ಒಟ್ಟು ಪರಿಹಾರದ ಮೊತ್ತ	**ರೂ.33,07,300/-**

1 ನೇ ಅರ್ಜಿದಾರರು ಹೆಂಡತಿಯಾಗಿದ್ದು 2 ಮತ್ತು 3 ನೇ ಅರ್ಜಿದಾರರು ಮೃತ ರಹೀಂ ಯಾನೆ ರಹೀಂ ಸಾಬ್ ರವರ ಮಕ್ಕಳಾಗಿದ್ದು , 4 ಮತ್ತು 5 ರವರು ತಂದೆ ತಾಯಿಯಾಗಿರುತ್ತಾರೆ. ಆದ್ದರಿಂದ, 1 ಮತ್ತು 2 ನೇ ಅರ್ಜಿದಾರರು ತಲಾ 40:20:20:05:15 ಅನುಪಾತದಲ್ಲಿ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ.

19. ವಿವಾದಾಂಶ-1 ರಲ್ಲಿ ವಿವರಿಸಿದಂತೆ, ಸೀಬರ್ಡ್ ಟೂರಿಸ್ಟ್ ಬಸ್ ಸಂಖ್ಯೆ ಕೆಎ.01.ಎಬಿ.7426 ಚಾಲಕನ ನಿರ್ಲಕ್ಷತನದಿಂದ ಅಪಘಾತ ಸಂಭವಿಸಿದೆ ಎಂದು ಈ ನ್ಯಾಯಾಧೀಕರಣವು ಅಭಿಪ್ರಯಿಸಿರುತ್ತದೆ. 2 ನೇ ಎದುರುದಾರರು ತಮ್ಮ ತಕರಾರಿನಲ್ಲಿ 1 ನೇ

ಎದುರುದಾರರ ವಾಹನಕ್ಕೆ ವಿಮೆ ಇರುವುದನ್ನು ಅಲ್ಲಗಳೆದಿದ್ದರೂ ಕೂಡ ನಿ.ಆರ್.1 ನ್ನು ಹಾಜರುಪಡಿಸಿದ್ದು ನಿ.ಆರ್.1 ರಲ್ಲಿ 30.09.2021 ರಿಂದ 29.09.2023 ರವರೆಗೆ ವಿಮೆ ಇರುವುದು ಕಂಡು ಬರುತ್ತದೆ. ಈ ಅಪಘಾತವು 04.02.2023 ರಂದು ಸಂಭವಿಸಿರುತ್ತದೆ. ಪಾಲಿಸಿಯ ಪ್ರಕಾರ ವಾಹನ ಸಂಖ್ಯೆ ಕೆಎ.01.ಎಬಿ.7426 ವಾಹನಕ್ಕೆ ಅಪಘಾತದ ದಿಃ 04.02.2023 ರಂದು ವಿಮೆ ಚಾಲ್ತಿಯಲ್ಲಿರುತ್ತದೆಂದು ನಮೂದು ಇರುತ್ತದೆ. ಆದ್ದರಿಂದ, 2 ನೇ ಎದುರುದಾರರು ಅರ್ಜಿದಾರರಿಗೆ ಮೇಲೆ ವಿವರಿಸಿದಂತೆ **ರೂ.33,07,300/-** ಗಳ ಪರಿಹಾರದೊಂದಿಗೆ ಶೇಕಡಾ 6.00 ರಂತೆ ವಾರ್ಷಿಕ ಬಡ್ಡಿಯ ಸಮೇತ ಅರ್ಜಿದಾರರು ಅರ್ಜಿ ಸಲ್ಲಿಸಿದ ದಿನಾಂಕದಿಂದ ಪರಿಹಾರದ ಹಣ ಸಂಪೂರ್ಣವಾಗಿ ವಸೂಲಾತಿಯಾಗುವವರೆಗೆ ಕೊಡಲು ಬದ್ಧರಾಗಿರುತ್ತಾರೆ ಮತ್ತು ಅರ್ಜಿದಾರರು ಪಡೆಯಲು ಅರ್ಹರಾಗಿರುತ್ತಾರೆ ಎಂದು ತೀರ್ಮಾನಕ್ಕೆ ಬಂದು, ವಿವಾದಾಂಶ-3 ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

20. ವಿವಾದಾಂಶ-3:- ಈ ಮೇಲೆ ಚರ್ಚಿಸಿದ ವಿವಾದಾಂಶಗಳ ಆಧಾರದ ಮೇಲೆ ಕೆಳಗಿನಂತೆ ಆದೇಶಿಸಲಾಗಿದೆ.

ಆದೇಶ

ಅರ್ಜಿದಾರರು ಮೋಟಾರು ವಾಹನ ಕಾಯ್ದೆ 1988 ಹಾಗೂ ತಿದ್ದುಪಡಿ 1994 ರ ಕಲಂ 166 ರಡಿ ಸಲ್ಲಿಸಿದ ಅರ್ಜಿಯನ್ನು ಖರ್ಚಿನೊಂದಿಗೆ ಭಾಗಶಃ ಪುರಸ್ಕರಿಸಲಾಗಿದೆ.

1 ರಿಂದ 5 ನೇ ಅರ್ಜಿದಾರರು ರೂ.33,07,300/- ಗಳ ಪರಿಹಾರದ ಮೊತ್ತದಲ್ಲಿ ತಲಾ 40:20:20:05:15 ಅನುಪಾತದಂತೆ ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ಸದರಿ ಪರಿಹಾರದ

ಮೊತ್ತದೊಂದಿಗೆ ಈ ಅರ್ಜಿ ದಾಖಲಿಸಿದ ದಿನಾಂಕದಿಂದ ಪೂರ್ತಿ ಹಣ ವಸೂಲಾತಿಯಾಗುವವರೆಗೆ ಶೇಕಡಾ 6.00 ರಷ್ಟು ಬಡ್ಡಿದರದೊಂದಿಗೆ 2 ನೇ ಎದುರುದಾರರ ಕಡೆಯಿಂದ ವಸೂಲಿ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಹಾಗೂ 2 ನೇ ಎದುರುದಾರರು ಸದರಿ ಪರಿಹಾರದ ಮೊತ್ತವನ್ನು ಬಡ್ಡಿಯೊಂದಿಗೆ ಒಂದು ತಿಂಗಳ ಅವಧಿಯೊಳಗಾಗಿ ಠೇವಣಿ ಇಡಲು ಆದೇಶಿಸಲಾಗಿದೆ.

2 ನೇ ಎದುರುದಾರರು ಪರಿಹಾರದ ಹಣವನ್ನು ಜಮಾ ಮಾಡಿದ್ದಲ್ಲಿ, 1 , 2 ಮತ್ತು 5 ನೇ ಅರ್ಜಿದಾರರ ಬಾಬ್ತು ಪರಿಹಾರದ ಮೊತ್ತದಲ್ಲಿ ಶೇಕಡಾ 40 ರಷ್ಟು ಹಣವನ್ನು ಅವರು ಇಚ್ಚಿಸುವ ಯಾವುದಾದರೂ ರಾಷ್ಟ್ರೀಕೃತ ಅಥವಾ ಶೆಡ್ಯೂಲ್ ಬ್ಯಾಂಕಿನಲ್ಲಿ ನಾಲ್ಕು ವರ್ಷಗಳ ಕಾಲ ಠೇವಣಿ ಇಡತಕ್ಕದ್ದು ಹಾಗೂ ಉಳಿದ ಹಣವನ್ನು ಅರ್ಜಿದಾರರಿಗೆ ಪಾವತಿಸತಕ್ಕದ್ದು. ನಾಲ್ಕು ವರ್ಷಗಳ ನಂತರ ಠೇವಣಿ ಇಟ್ಟ ಹಣವನ್ನು 1, 2 ಮತ್ತು 5 ನೇ ಅರ್ಜಿದಾರರು ಪಡೆಯಲು ಅರ್ಹರಾಗಿರುತ್ತಾರೆ.

3 ನೇ ಅರ್ಜಿದಾರರ ಬಾಬ್ತು ಪರಿಹಾರದ ಮೊತ್ತವನ್ನು ಶೇಕಡಾ 40 ರಷ್ಟು ಅವರು ಇಚ್ಚಿಸುವ ಯಾವುದಾದರೂ ರಾಷ್ಟ್ರೀಕೃತ ಅಥವಾ ಶೆಡ್ಯೂಲ್ ಬ್ಯಾಂಕಿನಲ್ಲಿ ನಾಲ್ಕು ವರ್ಷಗಳ ಕಾಲ ಠೇವಣಿ ಇಡತಕ್ಕದ್ದು ಉಳಿದ ಶೇಕಡಾ 60 ರಷ್ಟು ಹಣವನ್ನು ಅವರು ವಯಸ್ಕರಾಗುವವರೆಗೆ ಠೇವಣಿ ಇಡತಕ್ಕದ್ದು ನಂತರ ಅವರು ಆ ಹಣವನ್ನು ಪಡೆಯಲು ಅರ್ಹರಾಗಿರುತ್ತಾರೆ .

2 ನೇ ಎದುರುದಾರರು ಪರಿಹಾರದ ಹಣವನ್ನು ಜಮಾ ಮಾಡಿದ್ದಲ್ಲಿ, 5 ನೇ ಅರ್ಜಿದಾರರ ಬಾಬ್ತು ಸಂಪೂರ್ಣ ಪರಿಹಾರದ ಹಣವನ್ನು ಬಿಡುಗಡೆ ಮಾಡಲು ಕಛೇರಿಗೆ ನಿರ್ದೇಶಿಸಿದೆ.

ಅರ್ಜಿಯಲ್ಲಿನ ವಕೀಲರ ಶುಲ್ಕ ರೂ.1,000/- ದಂತೆ ನಿಗಧಿಪಡಿಸಲಾಗಿದೆ.

ಈ ರೀತಿ ಆವಾರ್ಡ್ ಬರೆಯಲು ಆದೇಶಿಸಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 15 ನೇ ಏಪ್ರಿಲ್-2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಹಿರಿಯೂರು.

ಅನುಬಂಧ

I　ಅರ್ಜಿದಾರರ ಪರ ಗುರುತಿಸಲಾದ ಸಾಕ್ಷಿದಾರರ ಪಟ್ಟಿಃ

ಪಿ.ಡಬ್ಲ್ಯೂ-1　ಃ　ಶಬೀನಬೇಗಂ

II　ಅರ್ಜಿದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-

ನಿ.ಪಿ-1　ಃ　ಪ್ರಥಮ ವರ್ತಮಾನ ವರದಿಯ ಪ್ರತಿ.

ನಿ.ಪಿ-2　ಃ　ಹೇಳಿಕೆ ಪ್ರತಿ.

ನಿ.ಪಿ-3　ಃ　ಸ್ಥಳ ಮಹಜರಿನ ಪ್ರತಿ.

ನಿ.ಪಿ-4　ಃ　ಶವ ತನಿಖಾ ವರದಿ

ನಿ.ಪಿ-5　ಃ　ಮರಣೋತ್ತರ ಪರೀಕ್ಷೆಯ ಪ್ರತಿ

ನಿ.ಪಿ–6 ಃ ಐ.ಎಂ.ವಿ. ವರದಿಯ ಪ್ರತಿ.
ನಿ.ಪಿ–7 ಃ ಚಾರ್ಜ್ ಶೀಟಿನ ಪ್ರತಿ
ನಿ.ಪಿ–8 ಃ 1 ನೇ ಅರ್ಜಿದಾರರ ಆಧಾರ್ ಕಾರ್ಡ್ ಪ್ರತಿ
ನಿ.ಪಿ–9 ಃ 2 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ
ನಿ.ಪಿ–10 ಃ 3 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ
ನಿ.ಪಿ–11 ಃ 4 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ
ನಿ.ಪಿ–12 ಃ 5 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ಪ್ರತಿ
ನಿ.ಪಿ–13 ಃ ಮೃತ ರಹೀಂ ಸಾಬ್ ರವರ ಆಧಾರ್ ಕಾರ್ಡ್ ನ ಪ್ರತಿ
ನಿ.ಪಿ–14 ಃ ವಂಶ ವೃಕ್ಷ

III ಎದುರುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–

–ಇಲ್ಲ –

IV ಎದುರುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–

ನಿ.ಆರ್–1ಃ ವಿಮಾ ಪಾಲಿಸಿಯ ಪ್ರತಿ

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಹಿರಿಯೂರು .

Visit ecourts.gov.in for updates or download mobile app “eCourts Services” from Android or iOS

SUJATHA SUVARNA B
Digitally signed by SUJATHA SUVARNA B
Date: 2026.04.17 15:51:13 +0530